**OS 17/2023 (PW-1)**

ದಿಃ 06-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : **3 ನೇ ಪ್ರತಿವಾದಿ ಪರ ಶ್ರೀ. DDD ವಕೀಲರಿಂದ:**

ನಮ್ಮ ಕುಟುಂಬದ ಒಟ್ಟು ಜಮೀನು 10 ಎಕರೆ 17 ಗುಂಟೆ ಇರುತ್ತದೆ. 2 ನೇ ಪ್ರತಿವಾದಿ ನಮ್ಮ ಊರಿನವರು ಇರುತ್ತಾರೆ. 2 ಮತ್ತು 3 ಪ್ರತಿವಾದಿಯವರು ಅಣ್ಣ ತಮ್ಮಂದಿರು ಎಂದರೆ ಸರಿ. 2 ಮತ್ತು 3 ಪ್ರತಿವಾದಿಯವರು 20 ಎಕರೆ 17 ಗುಂಟೆ ಜಮೀನು ಹೊಂದಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಖರೀದಿ ಪತ್ರದ 6 ಎಕರೆ 14 ಗುಂಟೆಯಲ್ಲಿ 17 ಗುಂಟೆ ಜಮೀನನ್ನು 3 ನೇ ಪ್ರತಿವಾದಿಗೆ ಬಿಟ್ಟುಕೊಡಬೇಕು ಎಂದು ನಮ್ಮ ಮತ್ತು 2 ನೇ ಪ್ರತಿವಾದಿ ನಡುವೆ ಒಪ್ಪಂದ ಆಗಿರುತ್ತದೆ ಎಂದರೆ ಸರಿ. ಜಮೀನು ಖರೀದಿಸಬೇಕಾದರೆ ಮೊದಲು ಹದ್ದುಬಸ್ತ ನಕ್ಷೆ ತಯಾರಿಸಬೇಕಾಗುತ್ತದೆ ಎಂದರೆ ಸರಿ. ಖರೀದಿಗೆ ಪಡೆಯುವ ಮುಂಚೆ 11-ಇ ನಕ್ಷೆ ಮಾಡಿಸಿಲ್ಲ ಆದರೆ ಖಾಸಗಿ ಸರ್ವೆ ಮಾಡಿಸಿರುತ್ತೇವೆ. ಸಾಕ್ಷಿ ಮುಂದುವರೆದು 2 ನೇ ಪ್ರತಿವಾದಿಗೆ ಜಮೀನು ಮಾರಾಟ ಮಾಡುವ ಸಮಯದಲ್ಲಿ ತುಂಬ ಅನಾನುಕೂಲ ಇದ್ದಿದರಿಂದ ಖಾಸಗಿ ಸರ್ವೆ ಮಾಡಿಸಿ ಖರೀದಿ ಮಾಡಿರುತ್ತೇವೆ ಮತ್ತು 3 ನೇ ಪ್ರತಿವಾದಿ ತಕರಾರು ಮಾಡಿದಲ್ಲಿ ಆತ ನಮ್ಮ ಅಣ್ಣ ಇದ್ದು ಆತನಿಗೆ ನಾವು ಹೇಳುತ್ತೇವೆ ಎಂದು 2 ನೇ ಪ್ರತಿವಾದಿ ತಿಳಿಸಿರುತ್ತಾನೆ. 2 ಮತ್ತು 3 ಪ್ರತಿವಾದಿ ಜಮೀನುಗಳ ನಡುವೆ ಒಂದು ಬಾಂದಾರು ಇರುತ್ತದೆ ಎಂದರೆ ಸರಿ. 2 ಮತ್ತು 3 ಪ್ರತಿವಾದಿ ರವರು ತಲಾ 10 ಎಕರೆ 17 ಗುಂಟೆ ಜಮೀನು ಹೊಂದಿರುತ್ತಾರೆ ಎಂದರೆ ಸರಿ. 2 ಪ್ರತಿವಾದಿಯಿಂದ ಖರೀದಿ

ಪಡೆಯುವಾಗ 3 ನೇ ಪ್ರತಿವಾದಿ ಸಹಿ ಪಡೆದಿಲ್ಲ ಎಂದರೆ ಸರಿ. ನಮ್ಮ ಮತ್ತು ಪ್ರತಿವಾದಿಯರ ನಡುವೆ ಒಟ್ಟು 32 ಗುಂಟೆ ಜಮೀನಿಗೆ ತಕರಾರು ಇದ್ದು ಸದರಿ 32 ಗುಂಟೆಯಲ್ಲಿ 17 ಗುಂಟೆ ಜಮೀನನ್ನು ನಾನು ಪ್ರತಿವಾದಿಗೆ ಬಿಟ್ಟುಕೊಡಬೇಕಾಗಿರುತದೆ. 3 ನೇ ಪ್ರತಿವಾದಿ ವಿರುದ್ಧ ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ಇಲಾಖೆಯೊಂದಿಗೆ ಶಾಮೀಲಾಗಿ ಸುಳ್ಳು ದಾಖಲೆ ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ